ದಿನಾಂಕಃ 05-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಎಸ್ ಎನ್ ಎಸ್ ವಕೀಲರಿಂದ

ನಾನು 5-6 ನೇ ತರಗತಿ ಓದಿರುತ್ತೇನೆ. ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ದಾವಾ ಆಸ್ತಿಗೂ ನಮ್ಮ ಊರಿಗೂ ಎಷ್ಟು ದೂರ ಆಗುತ್ತದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಏನೇನು ದಾಖಲೆಗಳನ್ನು ನೋಡಿರುತ್ತೀರಿ ಎಂದರೆ ಡೂಪ್ಲಿಕೇಟ್ ಸಾಗುವಳಿ ಚೀಟಿಯನ್ನು ಠಾಣೆಯಲ್ಲಿ ಕೊಟ್ಟಿರುವುದನ್ನು ನೋಡಿರುತ್ತೇನೆ. ಡೂಪ್ಲಿಕೇಟ್ ಸಾಗುವಳಿ ಚೀಟಿ ಅಂತ ನಿಮಗೆ ಹೇಗೆ ಗೊತ್ತಾಯಿತು ಎಂದರೆ ತಹಸೀಲ್ದಾರ್ ಕಛೇರಿಗೆ ಅರ್ಜಿ ಕೊಟ್ಟಾಗ ಗೊತ್ತಾಗಿರುತ್ತದೆ. ಅದನ್ನು ತಾಲ್ಲೂಕು ಕಛೇರಿಯಲ್ಲಿ ಪರಿಶೀಲನೆ ಮಾಡಿರುತ್ತೀರಾ ಎಂದರೆ ನಾನು ಅರ್ಜಿ ಕೊಟ್ಟಾಗ ಪರಿಶೀಲನೆ ಮಾಡಿರುತ್ತಾರೆ. ಏನು ದಾಖಲೆ ನೋಡಿರುತ್ತೀರಿ ಎಂದರೆ ತಹಸೀಲ್ದಾರ್ ರವರು ಅದು ಡೂಪ್ಲಿಕೇಟ್ ಅಂತ ಹಿಂಬಹರ ಕೊಟ್ಟಿರುತ್ತಾರೆ. ನಿಮಗೆ ತಾಲ್ಲೂಕು ಕಛೇರಿಯಲ್ಲಿ ಪೋಲಿಸ್ ಠಾಣೆಯಲ್ಲಿ ಮತ್ತು ನ್ಯಾಯಾಲಯದಲ್ಲಿ ಯಾವ ರೀತಿ ದಾಖಲೆ ತೆಗೆದುಕೊಳ್ಳಬೇಕು ಅಂತ ಗೊತ್ತು ಎಂದರೆ ಅರ್ಜಿ ಕೊಟ್ಟು ತೆಗೆದುಕೊಳ್ಳಬೇಕು. ಅದೇ ರೀತಿ ನಿಮ್ಮ ಊರಿನಲ್ಲಿ ಬೇಕಾದ ದಾಖಲೆಗಳನ್ನು ತೆಗೆದುಕೊಳ್ಳಲು ಅರ್ಜಿ ಕೊಡುತ್ತೀರಿ ಎಂದರೆ ಸಾಕ್ಷಿಯು ನನಗೆ ಬೇಕಾದ ದಾಖಲೆಗಳಿಗೆ ಅರ್ಜಿ ಕೊಟ್ಟು ಪಡೆದುಕೊಳ್ಳುತ್ತೇನೆ. ದಾವಾ ಆಸ್ತಿಯಲ್ಲಿ ಏನು ಬೆಳೆ ಇದೆ ಅಂತ ತಿಳಿದುಕೊಂಡಿರುತ್ತೀರಿ ಎಂದರೆ ಆ ಜಮೀನು ಇರುವುದಿಲ್ಲ. ಆ ಜಮೀನಿನಲ್ಲಿ ವಾದಿ ರಾಗಿ ಮತ್ತು ಕಡಲೇಕಾಯಿ ಬೆಳೆಯುತ್ತಿದ್ದಾರೆ ಎಂದರೆ ಸುಳ್ಳು

ಜಮೀನು ಕರಾಬು ಜಮೀನು ಅಂತ ಹೇಳಿದ್ದು ಕರಾಬು ಜಮೀನು ಅಂತ ತೋರಿಸಲು ದಾಖಲೆ ನನ್ನ ಬಳಿ ಇಲ್ಲ. ಆ ಜಮೀನಿನಲ್ಲಿ ಕುರಿ ದನಗಳನ್ನು ಮೇಯಿಸುತ್ತಾರೆ ಅಂತ ತೋರಿಸಲು ದಾಖಲೆ ಇದೆಯಾ ಎಂದರೆ ಜಮೀನೇ ಇರುವುದಿಲ್ಲ. ನಿಮ್ಮ ಜಮೀನಿಗೆ ಈ ದಾವಾ ಆಸ್ತಿಗೆ ಸಂಬಂಧ ಇಲ್ಲ ಎಂದರೆ ದಾವಾ ಆಸ್ತಿಯೇ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಅಲ್ಲಿ ಇಲ್ಲ ಅಂತ ದಾಖಲೆ

ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ತಹಸೀಲ್ದಾರ್ ಕೊಟ್ಟಿರುವ ಹಿಂಬಹರ ಕೊಟ್ಟಿರುತ್ತೇನೆ. ನೀವು ಕೊಟ್ಟಿರುವ ಹಿಂಬಹರದಲ್ಲಿ ದಾವಾ ಆಸ್ತಿ ಇಲ್ಲ ಅಂತ ಹಿಂಬಹರದಲ್ಲಿ ಇಲ್ಲ ಎಂದರೆ ಹಿಂಬಹರ ಕೊಟ್ಟಿರುತ್ತಾರೆ. ವಾದಿ ಈ ದಾವೆಯನ್ನು ಹಾಕುವ ಮೊದಲೇ ಹಿಂಬಹರ ಪಡೆದುಕೊಂಡಿರುತ್ತೀರಿ ಎಂದರೆ ವಾದಿ ಕೋರ್ಟ್ ಗೆ ಬರುವ ಪೂರ್ವದಲ್ಲಿ ಠಾಣೆಗೆ ಹೋಗಿದ್ದು ಆಗ ಅರ್ಜಿ ಕೊಟ್ಟು ಪಡೆದಿರುತ್ತೇವೆ. ತಾಲ್ಲೂಕು ಕಛೇರಿಯಲ್ಲಿ ಕಡತವನ್ನು ದುರುಪಯೋಗಪಡಿಸಿ ಕಡತ ಇಲ್ಲ ಅಂತ ಹಿಂಬಹರ ನೀವೇ ತಂದಿರುತ್ತೀರಿ ಎಂದರೆ ಸುಳ್ಳು

ನಿಪಿ.2 ಸಾಗುವಳಿ ಚೀಟಿ ವಾದಿಯರು ಕೊಟ್ಟಿರುವುದು ಎಂದರೆ ಸರಿ. ಅದರಲ್ಲಿ ತಹಸೀಲ್ದಾರ್ ರವರ ಸಹಿ ಇದೆ ಎಂದರೆ ಅದನ್ನು ಪೋರ್ಜರಿ ಮಾಡಿರುತ್ತಾರೆ. ಸಾಗುವಳಿ ಚೀಟಿಯಲ್ಲಿ ಸೂರ್ಯನಾರಾಯಣ ಬಿನ್ ವರದಿಪ್ಪ ಅಂತ ನಮೂದು ಇದೆ ಎಂದರೆ ಸೃಷ್ಟಿ ಮಾಡಿಕೊಂಡಿರುತಾತರೆ. ಸರ್ವೆ ನಂ. 9 ರ ಪೈಕಿ 2 ಎಕರೆ ಮಂಜೂರಾಗಿದೆ ಎಂದರೆ ಅದು ನಮ್ಮ ಊರಿಗೆ ಸಂಬಂಧಪಟ್ಟಿದ್ದು ಅಲ್ಲ ಬೋಡಗುಂಡ್ಲಪಲ್ಲಿಗೆ ಸಂಬಂಧಿಸಿದ್ದು. ಬೋಡಗುಂಡ್ಲಪಲ್ಲಿಯಲ್ಲಿ ನಿಮಗೆ ಸಂಬಂದಿಸಿದ ಜಮೀನು ಇದೆಯಾ ಎಂದರೆ ಇಲ್ಲ. ವಾದಿ ಸೂರ್ಯನಾರಾಯಣ ನಿಮ್ಮ ಊರಿನವರು ಎಂದರೆ ಅವರು ಬೇರೆ ಊರಿನಿಂದ ನಮ್ಮ ಊರಿಗೆ ಬಂದು ಮನೆ ಕಟ್ಟಿಕೊಂಡಿರುತ್ತಾರೆ. 50 ವರ್ಷಗಳಿಂದ ನಿಮ್ಮ ಊರಿನಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಮಧ್ಯದಲ್ಲಿ ಬಂದು ಕಟ್ಟಿಕೊಂಡಿರುತ್ತಾರೆ. ಸರ್ವೆ ನಂ9 ರಲ್ಲಿ ವ್ಯವಸಾಯಗಾರರ ಕಾಲಂ ನಲ್ಲಿ 1971 ರಿಂದ ಸೂರ್ಯನಾರಾಯಣ ಅಂತ ಹೆಸರು ನಮೂದು ಆಗಿದೆ ಎಂದರೆ ಸ್ವಾದೀನದಲ್ಲಿ ಇಲ್ಲ ಜಮೀನು ಇಲ್ಲ ಎಂದು ನುಡಿಯುತ್ತಾರೆ. ಪಹಣಿ ಪತ್ರಿಕೆಯನ್ನು ತಹಸೀಲ್ದಾರ್ ಕಛೇರಿಯವರು ಕೊಟ್ಟಿರುತ್ತಾರೆ ಎಂದರೆ ಕೊಟ್ಟಿರುವುದಿಲ್ಲ. ನೀವು ನೀಡಿರುವ ಹಿಂಬಹರ ವಾದಿಗೆ ತೊಂದರೆ ಕೊಡಬೇಕು ಅಂತ ಸೃಷ್ಟಿ ಮಾಡಿಕೊಂಡು ಹಾಕಿರುವ ದಾಖಲೆ ಎಂದರೆ ಸರಿಯಲ್ಲ. ವಾದಿಯ ಸ್ವಾಧೀನಕ್ಕೆ ನೀನು ತೊಂದರೆ ಕೊಡುತ್ತಿರುವುದಕ್ಕೆ ಅವರು ನಿಮ್ಮ ವಿರುದ್ಧ ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ವಾದಿಗೆ ತೊಂದರೆ ಕೊಡಲು ಸುಳ್ಳು ದಾಖಲೆಗಳನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.